ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು	:	ಶ್ರೀ ಐವನ್ ಡಿ.ಸೋಜಾ (ನಾಮ ನಿರ್ದೇಶನ ಹೊಂದಿದವರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1251
ಉತ್ತರಿಸಬೇಕಾದ ದಿನಾಂಕ	:	17.03.2020.
ಉತ್ತರಿಸಬೇಕಾದ ಸಚಿವರು	:	ಸಹಕಾರ ಸಚಿವರು.

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಪ್ರಸ್ತುತ ನಡೆಯುವ ಸಹಕಾರಿ ಸಂಘಗಳ ಚುನಾವಣೆಯಲ್ಲಿ ಮತದಾನ ನಡೆಸಲು ಹೈಕೋರ್ಟ್ ನಿರ್ದೇಶನವನ್ನು ತಡೆಯಲು ಮತ್ತು ಸರಿಯಾದ ನಿಯಮಗಳನ್ನು ರೂಪಿಸಲು ಸರ್ಕಾರ ವಿಫಲಗೊಂಡಿದೆಯೇ; ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು ವಿವರ ನೀಡುವುದು)	ಭಾರತೀಯ ಸಂವಿಧಾನ 97ನೇ ತಿದ್ದುಪಡಿ ಅಧಿನಿಯಮ 2011ರ ಉಪಬಂಧಗಳಿಗೆ ಅನುಸಾರವಾಗಿ ಕರ್ನಾಟಕ ವಿಧಾನ ಮಂಡಲವು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ಕ್ಕೆ 2013ರಲ್ಲಿ ತಿದ್ದುಪಡಿ ತರಲಾಗಿದೆ. ಸಹಕಾರ ಸಂಘಗಳ ಸದಸ್ಯರು ಸಂಘಗಳ ಸಾಮಾನ್ಯ ಸಭೆ ಮತ್ತು ಆರ್ಥಿಕ ಚಟುವಟಿಕೆಗಳ ಕುರಿತಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂನ ಉದ್ಧೃತ ಭಾಗ ಕೆಳಕಂಡಂತಿದೆ.:- **"ಕಲಂ 20(2) (ಎ-iv) ಕಳೆದ ಐದು ಸಾಮಾನ್ಯ ಸಭೆಗಳ ಪೈಕಿ ಮೂರು ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪುವ ಒಬ್ಬ ಸದಸ್ಯ, ಒಬ್ಬ ಪ್ರತಿನಿಧಿ ಅಥವಾ ಒಬ್ಬ ಡೆಲಿಗೇಟ್.** **ಕಲಂ 20(2) (ಎ-v) ಮೂರು ನಿರಂತರ ಸಹಕಾರ ವರ್ಷಗಳವರೆಗೆ ಒಂದು ಸಹಕಾರ ಸಂಘದ ಉಪವಿಧಿಗಳಲ್ಲಿ ಪ್ರತಿ ವರ್ಷದಲ್ಲಿ ಒಬ್ಬ ಸದಸ್ಯನು ಬಳಸಿಕೊಳ್ಳಲು ನಿರ್ದಿಷ್ಟಪಡಿಸಬಹುದಾದಂಥ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಒಬ್ಬ ಸದಸ್ಯ ಅಥವಾ ಪ್ರತಿನಿಧಿ** **[ಪರಂತು, (ಎ-iv) ಹಾಗೂ (ಎ-v)ನೇ ಉಪಖಂಡಗಳಲ್ಲಿರುವ ಸದಸ್ಯರುಗಳ ಸಂದರ್ಭದಲ್ಲಿ, ಅಂಥ ಸದಸ್ಯರು ಮೂರು ವರ್ಷಗಳ ಅವಧಿಗೆ ಸರ್ವಸದಸ್ಯರ ಸಭೆ ಅಥವಾ ಮಂಡಳಿಯ ಸದಸ್ಯರ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.]"** ಮೇಲ್ಕಂಡ ನಿಯಮಗಳಲ್ಲಿ ಯಾವುದೇ ಗೊಂದಲಕಾರಿ ವಿಷಯ ಇರುವುದಿಲ್ಲ. ಗೌರವ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಸದರಿ ಕಲಂ ಅನ್ವಯ ಮತದಾನ ವಂಚಿತರಾದ ಹಲವಾರು ಸಂಘಗಳ ಸದಸ್ಯರು ದಾವಾ ಪ್ರಕರಣ ದಾಖಲಿಸುವ ಮುಖೇನ ತಡೆಯಾಜ್ಞೆ ಪಡೆದು ಅರ್ಹ ಮತದಾರರ ಪಟ್ಟಿಗೆ ಸೇರುತ್ತಿರುವುದು ನಿಜವಾಗಿರುತ್ತದೆ. ಇಡೀ ವರ್ಷದಲ್ಲಿ ಆಯಾ ಸಹಕಾರ ಸಂಘದ ಅಭಿವೃದ್ಧಿ, ಆಗು-ಹೋಗುಗಳು ಹಾಗೂ ವಹಿವಾಟು ಅಭಿವೃದ್ಧಿ ಬಗ್ಗೆ ಚರ್ಚಿಸಿ ಆಡಳಿತ ಮಂಡಳಿಯನ್ನು ನಿಯಂತ್ರಿಸುವ ಪೂರ್ಣ ಅಧಿಕಾರವನ್ನು ವಾರ್ಷಿಕ ಸರ್ವ ಸದಸ್ಯರ ಸಭೆ ಹೊಂದಿರುತ್ತದೆ. ಇಂಥ ವೇದಿಕೆಯಲ್ಲಿ ಸದಸ್ಯರು ಸಕ್ರಿಯವಾಗಿ ಭಾಗವಹಿಸಿ ಸಂಘದ ಏಳಿಗೆಗೆ ಪಾಲ್ಗೊಳ್ಳಬೇಕು ಎಂಬುದು ಸಾಂವಿಧಾನಿಕ ತಿದ್ದುಪಡಿಯ ಆಶಯವಾಗಿರುತ್ತದೆ. ಆದರೆ ಇತ್ತೀಚೆಗೆ ಬರುತ್ತಿರುವ ದೂರು ಅರ್ಜಿಗಳು ಹಾಗೂ ನ್ಯಾಯಾಲಯಗಳಲ್ಲಿ ದಾಖಲಾಗುತ್ತಿರುವ ಪ್ರಕರಣಗಳಲ್ಲಿ ಸದಸ್ಯರು ಸಕ್ರಿಯವಾಗಿ ಭಾಗವಹಿಸದೇ ವಿನಾಯಿತಿಯನ್ನು ಕೋರುತ್ತಿರುವುದು ಸಹಕಾರ ಚಳುವಳಿಯ ಬೆಳವಣಿಗೆ ದೃಷ್ಟಿಯಿಂದ ಅಸಮಂಜಸವಾಗಿರುತ್ತದೆ.

		ಸಂಘದ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲಿ ಮತ್ತು ಸದಸ್ಯರು ಕನಿಷ್ಟ ಪ್ರಮಾಣದ ವಹಿವಾಟು ನಡೆಸಲಿ ಎಂಬ ಸದುದ್ದೇಶದಿಂದ ಕಲಂ 20(2) (ಎ–iv), (ಎ–v) ಅಳವಡಿಸಿರುವುದು ಸಹಕಾರಿ ತತ್ವಗಳಿಗನುಸಾರವಾಗಿ ಮತ್ತು ಎಲ್ಲಾ ಸಹಕಾರಿಗಳು ಈ ನಿಯಮವನ್ನು ತಪ್ಪದೇ ಅನುಚಾನವಾಗಿ ಪಾಲಿಸಿದಲ್ಲಿ ಸಹಕಾರ ಕ್ಷೇತ್ರ ಹಾಗು ಚಳುವಳಿ ಸದೃಢಗೊಳ್ಳಲಿದೆ. ಆದ್ದರಿಂದ ನಿಯಮಗಳನ್ನು ರೂಪಿಸುವಲ್ಲಿ ಸರ್ಕಾರ ವಿಫಲಗೊಂಡಿದೆ ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ.
ಆ)	ಸಹಕಾರಿ ಸಂಘಗಳಲ್ಲಿ ಅಕ್ರಮ/ಕಾನೂನು ಬಾಹಿರವಾಗಿ ವ್ಯವಹಾರ ನಡೆಸಿದ ಎಷ್ಟು ಸಂಘಗಳನ್ನು ಗುರುತಿಸಿ ಕ್ರಮಕೈಗೊಳ್ಳಲಾಗಿದೆ; (ವಿವರ ನೀಡುವುದು)	ರಾಜ್ಯದಲ್ಲಿ ಅಕ್ರಮ/ಕಾನೂನು ಬಾಹಿರವಾಗಿ ವ್ಯವಹಾರ ನಡೆಸಿದ 6050 ಸಹಕಾರ ಸಂಘಗಳನ್ನು ಗುರುತಿಸಿ ತಪ್ಪಿತಸ್ಥ ಸಹಕಾರ ಸಂಘದ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವಿರುದ್ದ ಸಿವಿಲ್ ಹಾಗೂ ಕ್ರಿಮಿನಲ್ ಕ್ರಮ ಕೈಗೊಳ್ಳಲಾಗಿದೆ.
ಇ)	ರಾಜ್ಯದಲ್ಲಿ ಸಹಕಾರಿ ಸಂಘಗಳು ನಷ್ಟದಲ್ಲಿ ಇರುವುದು ನಿಜವೇ; (ವಿವರ ನೀಡುವುದು)	ದಿನಾಂಕ 31.03.2019ರ ಅಂತ್ಯಕ್ಕೆ ಇದ್ದಂತೆ ರಾಜ್ಯದಲ್ಲಿ ಒಟ್ಟು 43608 ಸಹಕಾರ ಸಂಘಗಳಿದ್ದು, ಈ ಪೈಕಿ ನಷ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳ ಸಂಖ್ಯೆ 13824 ಇರುತ್ತವೆ. **ಜಿಲ್ಲಾವಾರು ವಿವರ ಅನುಬಂಧ–1ರಲ್ಲಿ ಲಗತ್ತಿಸಿದೆ.**
ಈ)	ಸಹಕಾರಿ ಸಂಘಗಳ ರಕ್ಷಣೆಗೆ ಮತ್ತು ನಿಯಮಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು? **(ವಿವರ ನೀಡುವುದು)**	ಸಹಕಾರ ಸಂಘಗಳ ರಕ್ಷಣೆಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ಸಹಕಾರ ಸಂಘಗಳ ನಿಯಮಗಳನ್ನು ರೂಪಿಸಲಾಗಿದೆ. ಈ ನಿಯಮಗಳನ್ನು ಅನುಷ್ಠಾನಗೊಳಿಸಲು ಸಹಕಾರ ಇಲಾಖೆಯ ವಿವಿಧ ವೃಂದದ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆಗೊಂಡಿದ್ದು, ಅದರನ್ವಯ ಆಯಾಯ ಅಧಿಕಾರಿಗಳು ಸದರಿ ಅಧಿನಿಯಮ ಮತ್ತು ನಿಯಮಗಳನ್ನು ಅನುಷ್ಠಾನಗೊಳಿಸಲು ಅಧಿಕಾರದತ್ತವಾಗಿರುತ್ತದೆ. ಅರೆನ್ಯಾಯಿಕ ಪ್ರಕರಣಗಳಲ್ಲಿ ಮೂಲ ಕಾರ್ಯವ್ಯಾಪ್ತಿಹೊಂದಿದ ಅಧಿಕಾರಿಯು ಹಾಗೂ ತತ್ಸಂಬಧ ಮೇಲ್ಮನವಿ ಪ್ರಾಧಿಕಾರಗಳು ಹಾಗೂ ಅಂತಿಮವಾಗಿ ಗೌ// ಉಚ್ಚನ್ಯಾಯಾಲಯದಲ್ಲಿಯೂ ಸಹ ಸಹಕಾರ ಸಂಘಗಳು ಭಾದಿತರಾದ ಪಕ್ಷದಲ್ಲಿ ರಕ್ಷಣೆ ಪಡೆಯಲು ಅರ್ಹರಿರುತ್ತಾರೆ.

ಸಂಖ್ಯೆ: ಸಿಒ 23 ಸಿಎಲ್‌ಎಮ್ 2020 (ಇ)

(ಎಸ್.ಟಿ ಸೋಮಶೇಖರ್)

ಸಹಕಾರ ಸಚಿವರು

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಐವನ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) ಇವರ ಪ್ರಶ್ನೆ ಸಂಖ್ಯೆ: 1048(1251) ರಲ್ಲಿ ಉಪ ಪ್ರಶ್ನೆ (ಇ) ಕ್ಕೆ ಸಂಬಂಧಿಸಿದಂತೆ ಉತ್ತರ

ಅನುಬಂಧ-1

ಕ್ರ.ಸಂ	ಜಿಲ್ಲೆಯ ಹೆಸರು	ನಷ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಘಗಳ ಸಂಖ್ಯೆ (ದಿನಾಂಕ 31.03.2019ರ ಅಂತ್ಯಕ್ಕೆ)
1	ಬೆಂಗಳೂರು ವಲಯ-1	209
2	ಬೆಂಗಳೂರು ವಲಯ-2	307
3	ಬೆಂಗಳೂರು ವಲಯ-3	199
4	ಬೆಂಗಳೂರು ವಲಯ-4	241
5	ಬೆಂಗಳೂರು ಗ್ರಾಮಾಂತರ	129
6	ರಾಮನಗರ	101
7	ತುಮಕೂರು	581
8	ಚಿತ್ರದುರ್ಗ	635
9	ಕೋಲಾರ	396
10	ಚಿಕ್ಕಬಳ್ಳಾಪುರ	302
11	ಶಿವಮೊಗ್ಗ	382
12	ದಾವಣಗೆರೆ	723
13	ಮೈಸೂರು	838
14	ಮಂಡ್ಯ	135
15	ಹಾಸನ	205
16	ಕೊಡುಗು	102
17	ಮಂಗಳೂರು	118
18	ಚಿಕ್ಕಮಗಳೂರು	144
19	ಚಾಮರಾಜನಗರ	154
20	ಉಡುಪಿ	63
21	ಬೆಳಗಾಂ	2066
22	ಬಿಜಾಪುರ	331
23	ಧಾರವಾಡ	572
24	ಕಾರವಾರ	224
25	ಹಾವೇರಿ	272
26	ಗದಗ	506
27	ಬಾಗಲಕೋಟೆ	368
28	ಗುಲ್ಬರ್ಗಾ	1207
29	ರಾಯಚೂರು	596
30	ಬೀದರ್	234
31	ಬಳ್ಳಾರಿ	661
32	ಕೊಪ್ಪಳ	247
33	ಯಾದಗಿರಿ	576
	ಒಟ್ಟು	**13824**